18	ಹಾವೇರಿ	651.54	651.54
19	ಕೊಡಗು	308.10	308.10
20	ಕೋಲಾರ	271.23	271.23
21	ಕೊಪ್ಪಳ	262.75	262.75
22	ಮಂಡ್ಯ	482.89	482.89
23	ಮೈಸೂರು	457.75	457.75
24	ರಾಮನಗರ	176.02	176.02
25	ರಾಯಚೂರು	328.18	328.18
26	ಶಿವಮೊಗ್ಗ	511.56	511.56
27	ತುಮಕೂರು	718.24	718.24
28	ಉಡುಪಿ	424.19	424.19
29	ಉತ್ತರ ಕನ್ನಡ	604.09	604.09
30	ಯಾದಗಿರಿ	185.94	185.94
	ಒಟ್ಟು:	**11942.16**	**11942.16**

ಬಸವಶ್ರೀ ಮತ್ತು ಇಂದಿರಾ ಅವಾಸ್ ಯೋಜನೆಗಳ ಮನೆಗಳು

1406(1458); ಶ್ರೀ ಬಣಕಾರ್ ಯು.ಬಿ.

ಅ) 2013–14ನೇ ಸಾಲಿನಲ್ಲಿ ರಾಜ್ಯದಲ್ಲಿ ಬಸವಶ್ರೀ ಹಾಗೂ ಇಂದಿರಾ ಆವಾಸ್ ಯೋಜನೆಗಳ ಅಡಿಯಲ್ಲಿ ಎಷ್ಟು ಮನೆಗಳ ನಿರ್ಮಾಣಕ್ಕೆ ಯೋಜನೆ ಹಾಕಿಕೊಳ್ಳಲಾಗಿತ್ತು (ಆರ್ಥಿಕ ಮತ್ತು ಭೌತಿಕ ವಿವರ ಒದಗಿಸುವುದು);

ಆ) ದಿನಾಂಕ: 31.01.2014 ರವರೆಗೆ ಈ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾದ ಮೊತ್ತ ಎಷ್ಟು;

ಇ) ಈ ಅವಧಿಯವರೆಗೆ ಸಾಧಿಸಿದ ಪ್ರಗತಿಯ ವಿವರ ಒದಗಿಸುವುದು?

ಶ್ರೀ ಡಾ॥ ಎಂ.ಹೆಚ್. ಅಂಬರೀಷ್ (ವಸತಿ ಸಚಿವರು)

ಅ) 2013–14ನೇ ಸಾಲಿನಲ್ಲಿ ರಾಜ್ಯದಲ್ಲಿ ಬಸವ ವಸತಿ ಯೋಜನೆಯಡಿ 1,80,000 ಮನೆಗಳನ್ನು ಹಾಗೂ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ 1,00,000 ಮನೆಗಳನ್ನು ನಿರ್ಮಾಣ ಮಾಡುವ ಗುರಿಯನ್ನು ಹೊಂದಲಾಗಿದೆ. ಇದಕ್ಕಾಗಿ ರಾಜ್ಯ ಸರ್ಕಾರವು ಬಸವ ವಸತಿ ಯೋಜನೆಗಾಗಿ ₹ 671.00 ಕೋಟಿ ಒದಗಿಸಿದ್ದು, ಇಂದಿರಾ ಆವಾಸ್ ಯೋಜನೆಗಾಗಿ ರಾಜ್ಯ ಸರ್ಕಾರದಿಂದ ₹ 332.25 ಕೋಟಿ ಹಾಗೂ ಕೇಂದ್ರ ಸರ್ಕಾರದಿಂದ ₹ 461.03 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ.

ಆ) ದಿನಾಂಕ: 31.01.2014 ರವರೆಗೆ ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರದಿಂದ ಒಟ್ಟು ₹ 829.32 ಕೋಟಿಗಳು ಹಾಗೂ ಕೇಂದ್ರ ಸರ್ಕಾರದಿಂದ ₹ 250.42 ಕೋಟಿಗಳ ಅನುದಾನ ಬಿಡುಗಡೆ ಮಾಡಲಾಗಿದೆ.

ಇ) ಈ ಅವಧಿಯಲ್ಲಿ ದಿನಾಂಕ 31.01.2014ರ ವರೆಗೆ ಒಟ್ಟು 2.49ಲಕ್ಷ ಮನೆಗಳನ್ನು ಪೂರ್ಣಗೊಳಿಸಲಾಗಿರುತ್ತದೆ.

ಯೋಜನೆ	ಪೂರ್ಣ
ಆಶ್ರಯ / ಬಸವ ವಸತಿ ಯೋಜನೆ	162695
ಗ್ರಾಮೀಣ ಅಂಬೇಡ್ಕರ್	3363
ನಗರ ಆಶ್ರಯ / ವಾಜಪೇಯಿ ನಗರ ವಸತಿ ಯೋಜನೆ	7391
ಇಂದಿರಾ ಆವಾಸ್ ಯೋಜನೆ	75733
ಒಟ್ಟು	249182